

ನಾನು ದೊಡ್ಡವಳಾದಾಗ ಘಟಪ್ರಭಾಕ್ಕೆ ಕರೆ ಹೋಗಿತ್ತು. ಅತ್ತ್ಯಾ ದೊಡ್ಡ ಟಿಫಿನ್ ಕ್ಯಾರಿಯರ್ ತುಂಬ ಗ್ವಾಸಿಗಿ ತಂದಿದ್ದಳು. ಹೋಳಿಗಿ, ಉಂಡಿ, ಚಿರೋಟಿ ಎಲ್ಲಾ ತಂದು ಬಾಳೆಲೆ ಹಾಕಿ ರಂಗೋಲಿ ಇಟ್ಟು 'ಹೊಟ್ಟಿ ತುಂಬ ಉಣ್ಣು' ಎಂದು ಒತ್ತಾಯದಿಂದ ಬಡಿಸಿದ್ದರು. ಆರತಿಯ ದಿನ ವೆಂಕಟೇಶನೂ ಬಂದಿದ್ದ. ಶ್ಯಾವಂತಿಗೆ ಹೂ ಹೆಣೆದ ಜಡೆಯೊಡನೆ ಸೀರೆಯುಟ್ಟು ಅಲಂಕೃತಳಾಗಿ ಬಂದವಳನ್ನು ನೋಡಿ ಕಣ್ಣರಳಿಸಿದ್ದ. ಅತ್ತ್ಯಾ ಸೂಕ್ಷ್ಮವಾಗಿ 'ನಮ್ಮ ವೆಂಕಟೇಶ ಊರಿಗೆ ತಿರಿಗಿ ಹೋಗ್ಲಿಕ್ಕೆ ವಲ್ಲೆ ಅನ್ಲಿಕ್ಕತ್ತಾನ. ಕೊಟ್ಟ ಬಿಡ್ರಿ ಹುಡುಗಿನ್ನ' ಎಂದು ನಗೆಯಾಡಿದ್ದಿತ್ತು. ಅಂತೂ ಕೊಂಡಿ ಆಗಲೇ ಬೆಸೆದುಕೊಂಡಂತಾಗಿತ್ತು.

ಅಕ್ಕ ಹತ್ತನೇ ತರಗತಿ ದಾಟಲಿಲ್ಲ. ಬಂದದ್ದರಲ್ಲೇ ಒಳ್ಳೆಯ ಸಂಬಂಧ ನೋಡಿ ಮದುವೆ ಮಾಡಿದರು. ಆಗ ನಾನು ಅದೇ ತಾನೆ ಎಸ್.ಎಸ್.ಎಲ್.ಸಿ. ಫಸ್ಟ್ ಕ್ಲಾಸಿನಲ್ಲಿ ಮುಗಿಸಿದ್ದೆ. ಮುಂದೆ ಓದುವ ಆಸೆ ಬೇಕಾದಷ್ಟಿತ್ತು. ಆದರೆ 'ವೆಂಕಟೇಶ ಮುಂದ ಓದಿಲ್ಲ. ಹಿಂಗಾಗಿ ಭಾಳ ಓದಿದ್ರ ನಮಗಾಗೂದುಲ್ಲ' ಎಂಬ ಮಾತು ಸೂಚ್ಯವಾಗಿ ಯಾರ ಮೂಲಕವೋ ಬಂತು. ಮನೆಯಲ್ಲೂ ಚರ್ಚೆಗಳಾದವು. 'ಗೋಕಾಕದಾಗೋ ಬೆಳಗಾವ್ಯಾಗೋ ಯಾರದೋ ಮನ್ಯಾಗಿಟ್ಟು ಓದಸಬೇಕು. ಅದರ ಬದ್ಲಿ ಮನ್ಯಾಗಿನ ಸಂಬಂಧ. ಕೇಂದ್ರ ಸರ್ಕಾರದ ನೌಕರಿ. ಮದವಿ ಮಾಡಿಬಿಡೋಣು' ಎಂದು ನಿರ್ಧರಿಸಿದರು. ನನಗೆ ಕೊಂಚ ನಿರಾಶೆಯಾದರೂ ವೆಂಕಟೇಶನ ನೋಟ ಎಲ್ಲ ಮರೆಸಿತ್ತು. ಮನೆಯೊಳಗಿನ ಸಂಬಂಧವೆಂದು ವಿನಾಯ್ತಿ ಇರಲಿಲ್ಲ. ವರದಕ್ಷಿಣೆ, ವರೋಪಚಾರದ ಮಾತುಗಳಲ್ಲಿ ಜಗ್ಗಾಟವಾಗಿ ಅಂತೂ ಮದುವೆಯ ದಿನ ಗೊತ್ತಾಯಿತು. ಅಮ್ಮ ಕೊಂಚ ಬೇಸರಗೊಂಡಿದ್ದರೂ 'ಭೋಲೊ ಹುಡುಗ. ಮನಿ ಮಂದಿ. ನಿನ್ನ ಕಾಳಜಿ ಇರೂದುಲ್ಲ. ದೊಡ್ಡಾಕಿದೊಂದ ಕಾಳಜಿ ಮಾಡಿದ್ರ ಸಾಕು' ಎಂದು ಸಂತೈಸಿಕೊಂಡಿದ್ದಳು. ನಾವಿಬ್ಬರೂ ಹೊಲದಲ್ಲಿ ಕದ್ದು ಮುಚ್ಚಿ ಓಡಾಡಿದ್ದೆವು. ಘಟಪ್ರಭಾ ನದೀತೀರದಲ್ಲಿ ಕೈ ಹಿಡಿದುಕೊಂಡು ನೀರಲ್ಲಿ ನಿಂತೆವು. ಎಳೆ ಸೀತನಿಗಳನ್ನು ಸುಟ್ಟು ತಿಂದು ನಕ್ಕಿದ್ದೆವು. ಬೆಳಗಾವಿಯ ಕುಂದಾ ತಂದು ಕೊಟ್ಟು 'ಈ ಕುಂದಾದಷ್ಟ ಸೀ ಇದ್ದಿ ನೀನು' ಎಂದು ಮೈಮುಟ್ಟಲು ಬಂದಿದ್ದ. ನಾನು ನುಣುಚಿಕೊಂಡು ಓಡಿಹೋಗಿದ್ದೆ. ಅವನ ನೆನಪಲ್ಲೇ ಕಳೆದ ಸುಂದರ ದಿನಗಳು. ನನ್ನನ್ನೂ ಸೇರಿ ಮನೆಯಲ್ಲಿ ಎಲ್ಲರಿಗೂ ನಿಶ್ಚಿಂತ ಭಾವ. ಸುರಕ್ಷಿತ ಅತ್ತೆಮನೆಯ ಕನಸು ಸೇರಿಕೊಂಡಿತ್ತು.

ಪಡಿಯೊದ್ದು ಅತ್ತೆ ಮನೆಗೆ ಬಂದಾಗಿತ್ತು. ಎಂದಿನಿಂದಲೂ ನೋಡಿದ ಆಡಿದ ಮನೆ. ಆದರೆ ಅತ್ತೆ, ಗಂಡ, ಮೈದುನ, ಅತ್ತಿಗೆಯರು ಹೊಸದಾಗಿದ್ದರೆಂದು ಅಂದೇ ಅರಿವಾಯಿತು. 'ಈಗ ನೀನು ಈ ಮನಿಗೆ ಹಿರೇ ಸೊಸಿ. ಸೀರಿ ಉಟಗೊ. ಅಡಗಿಮನಿಗೆ ನಡಿ' ಎಂದಾಗ ತಲೆ ತಗ್ಗಿಸಿಕೊಂಡು ನಡೆದಿದ್ದೆ. ಎಲ್ಲ ಸಹಿಸಿಕೊಂಡೆ. ನನ್ನ ಇನಿಯನಿಗಾಗಿ... ಒಲವಿಗಾಗಿ. ಆದರೆ ಕೆಲವೇ ದಿನಗಳು ಕಳೆಯುತ್ತಿದ್ದಂತೆ 'ಕನಸೇ ಬೇರೆ, ವಾಸ್ತವವೇ ಬೇರೆ' ಎಂದರಿವಾಗಿತ್ತು. ಕರದಂಟು ತಿನ್ನಿಸಿದ ಹುಡುಗ ಈಗ ದಂಟಿನಂತಾಗಿದ್ದ. ದಿನವಿಡೀ ದುಡಿತ. ರಾತ್ರಿ ಇವನ ಕಾಟ. ಕೊಂಚವೂ ರಸಿಕತೆ ಇಲ್ಲ, ಮೃದುಸ್ಪರ್ಶವಿಲ್ಲ, ರೋಮಾಂಚನವಿಲ್ಲ, ಬರೀ ಶಕ್ತಿ ಪ್ರದರ್ಶನ. ಬಸವಳಿದು ಹೋಗುತ್ತಿದ್ದೆ. ತಿಂಗಳೊಳಗೇ ಕರೆಯಲು ಬಂದ ಅಮ್ಮ ಗಾಬರಿಯಾಗಿದ್ದಳು. ವಾರ ನಿಂತವಳಿಗೆ ಮುಟ್ಟು ಬಂದಾಗ ವಿಪರೀತ ರಕ್ತಸ್ರಾವವಾಗಿತ್ತು. ಅಂತೂ ಸುಧಾರಿಸಿಕೊಂಡಿದ್ದೆ. ತಿರುಗಿ ಕರೆತಂದಾಗ ವಿಷಯ ಪ್ರಸ್ತಾಪಿಸುತ್ತಲೇ ಅತ್ತ್ಯಾ 'ಹೊಂದ್ಕೊಳ್ಳೋತನಕಾ ಹಿಂಗಾಗೋದನ' ಎಂದು ನಿರ್ಲಕ್ಷ್ಯದಿಂದ ನುಡಿದಾಗ ಅಮ್ಮ ಹೌಹಾರಿದ್ದಳು. ಅಪ್ಪ ಮೂಕವಾಗಿದ್ದ.

ದಿನಗಳು ಓಡಿದವು. ನನ್ನ ಒಡಲು ಚಿಗುರುತ್ತಲೇ ಗರ್ಭಪಾತವಾಗಿತ್ತು. ಅಮ್ಮ ನೊಂದು 'ಹೊರಗ ಕೊಟ್ಟೇವಿ ಹೆಂಗೋ ಅಂತ ಚಿಂತಿ ಮಾಡಿದ್ರ ದೊಡ್ಡಾಕಿನ ಆರಾಮ ಇದ್ದಾಳ. ಮನಿವಳಗ ಕೊಟ್ಟು ಇಕಿ ಪರಿಸ್ಥಿತಿ ಹಿಂಗ' ಎಂದು ಕಣ್ಣೀರಾಗಿದ್ದಳು. ಮುಂದಿನ ಬಾರಿ ಗರ್ಭ ನಿಂತಾಕ್ಷಣ ತವರಿಗೆ ಕರೆತಂದ ಅಮ್ಮ ನಂತರ ಘಟಪ್ರಭಾಕ್ಕೆ ಕರೆದೊಯ್ದರೂ ನನ್ನ ಜೊತೆ ತಾನೇ ಮಲಗುತ್ತಿದ್ದಳು. ಇದು ಅಮ್ಮ ಮತ್ತೆ ಅತ್ತ್ಯಾರ ನಡುವೆ ಅಸಮಾಧಾನಕ್ಕೆ ಕಾರಣವಾಗುತ್ತಿತ್ತು. ನಾನು ಮೂಕ ಪ್ರೇಕ್ಷಕಿ. ಚೊಚ್ಚಲು ಹೆರಿಗೆಯಾಗಿ ಸುಗುಣಾ ಹುಟ್ಟಿದ್ದಳು. ನಂತರವೂ ಅಷ್ಟೇ. ನನಗೆ ಕೆಲಸ ಕಡಿಮೆಯಾಗಲಿಲ್ಲ. ಜೊತೆಗೆ ಹಾಲು ಕುಡಿಯುವ ಮಗುವಿನ ಹೊಣೆ ಬೇರೆ. ನೆಂಟರ ಗಲಾಟೆ ಸದಾ ಇರುತ್ತಿತ್ತು. ರಾತ್ರಿಯ ಘರ್ಷಣೆಯೂ ತಪ್ಪುತ್ತಿರಲಿಲ್ಲ. ಮುಟ್ಟಿನ ಮೂರು ದಿನಗಳಲ್ಲಿ ಹೊರಗೆ ಮಲಗುತ್ತಿದ್ದುದೇ ನಿರಾಳವೆನಿಸುತ್ತಿತ್ತು. ಸಂಗಾತಿಯ ಇಷ್ಟಾನಿಷ್ಟಗಳನ್ನು, ನೋವು ನಲಿವುಗಳನ್ನು ಹಂಚಿಕೊಳ್ಳುವ ಗೊಡವೆಯೇ ಇಲ್ಲ. ಸೂಕ್ಷ್ಮ ವಿಷಯ. ಹೇಳುವುದಾದರೂ ಹೇಗೆ? ಅಪ್ಪ, ಅಮ್ಮನೂ ಅಸಹಾಯಕರು. ಅಳಿಯನ ಲಗಾಮೆಲ್ಲ ಅತ್ತೆಯ ಕೈಲೇ ಇತ್ತಲ್ಲ. ತಾಯಿಯ ಮಾತೆಂದರೆ ವೇದವಾಕ್ಯ ಅವನಿಗೆ. ಅತ್ತ್ಯಾ 'ನಾಜೂಕು ನಾರಿ ಇಕಿ' ಎಂದು ವ್ಯಂಗ್ಯವಾಡಿದಾಗ 'ನನ್ನಲ್ಲೇ ಏನೋ ಐಬಿದೆ' ಎನಿಸಿತ್ತು. ಎಲ್ಲ ಗಂಡ ಹೆಂಡಿರ ಸಂಬಂಧಗಳೂ ಹೀಗೆ ಇರುತ್ತವೇನೊ ಎಂದುಕೊಂಡ ಅಲ್ಪಮತಿ ನಾನು. ಎಲ್ಲರ ಬಾಯಲ್ಲೂ 'ಕುಸುಮಾ ಬಾಯಿ ಸತ್ತಾಕಿ. ಅತ್ತಿ, ಗಂಡ ಕೂಡೇ ಅರೀತಾರ' ಎಂಬ ಮಾತೂ ಕೇಳಿ ಬಂತು. ಇವೆಲ್ಲವುಗಳ ಮಧ್ಯೆ ಅನಂತ ಹುಟ್ಟಿದ. ನಂತರ ಸಂತೋಷ. ಅಬ್ಬಾ! ಎಲ್ಲವನ್ನೂ ಹೇಗೆ ಸಹಿಸಿದೆನೊ, ನಿಭಾಯಿಸಿದೆನೊ ಗೊತ್ತಿಲ್ಲ. ನೆನಸಿಕೊಂಡರೆ ಇನ್ನೂ ಮೈ 'ಜುಮ್' ಎನ್ನುತ್ತದೆ.

ಮೈದುನನ ಮದುವೆಯಾಗಿ ಓರಗಿತ್ತಿ ಮನೆಗೆ ಕಾಲಿಟ್ಟಳು. ಇದೇ ದಬ್ಬಾಳಿಕೆಯನ್ನು ಅವಳ ಮೇಲೆ ನಡೆಸಲಾಗಲಿಲ್ಲ. ಅವನು ಹೆಂಡತಿಯನ್ನು ಹೂವಿನಂತೆ ನೋಡಿಕೊಳ್ಳುತ್ತಿದ್ದ. ತವರಿನವರೂ ಶ್ರೀಮಂತರು. ಅವರ ಓಡಾಟ, ಸುತ್ತಾಟ, ರಸಮಯ ಕ್ಷಣಗಳಿಗೇನೂ ಕೊರತೆ ಇರಲಿಲ್ಲ. ಅವಳು ಗಂಡನಿಗೆ ಹೊಲಕ್ಕೆ ಬುತ್ತಿ ತೆಗೆದುಕೊಂಡು ಹೋದರೆ ಮನೆಯ ಕೆಲಸವೆಲ್ಲ ನನಗೇ ಎಂಬ ಅಲಿಖಿತ ಶಾಸನ. ವೆಂಕಟೇಶ ನಸುಕಿನಲ್ಲೇ ಎದ್ದು ಹೊಲಕ್ಕೆ ಹೋಗಿ ದುಡಿಯುತ್ತಿದ್ದರು. ಎಂಟೂವರೆಗೆಲ್ಲ ಮನೆಗೆ ಬಂದು ಊಟ ಮಾಡಿ ಸೈಕಲ್ ಮೇಲೆ ಆಫೀಸಿಗೆ ಹೊರಡುತ್ತಿದ್ದರು. ವರ್ಗವಾದರೂ ಅಕ್ಕಪಕ್ಕವೇ ಹಾಕಿಸಿಕೊಂಡು ಹೊಲದ ಉಸ್ತುವಾರಿಯನ್ನೆಲ್ಲ ನೋಡಿಕೊಳ್ಳುತ್ತಿದ್ದರು. ಬಂದ ಸಂಬಳ ಅತ್ತೆಯ ಕೈಗೇ ಹೋಗುತ್ತಿತ್ತು. ಎಲ್ಲಾದರೂ ಹೋಗಬೇಕಾದರೆ ಅತ್ತ್ಯಾಳ ಎದುರು ಕೈ ಒಡ್ಡಿ ನಿಲ್ಲಬೇಕು. ಅವಳು ಕೊಟ್ಟಷ್ಟಕ್ಕೇ ಸುಮ್ಮನಾಗಬೇಕು. ಮೈದುನ ಸುಖಪುರುಷ. ಅವರಿಬ್ಬರ ಕೈಲಿ ಯಾವಾಗಲೂ ದುಡ್ಡು ಆಡುತ್ತಿತ್ತು. ನಾವು ಬಾಯಿ ಮುಚ್ಚಿಕೊಂಡಿದ್ದಕ್ಕೆ ಮನೆಯಲ್ಲಿ ಶಾಂತಿ ಇತ್ತು. ಅವರಿಗೂ ಅವಳಿ ಗಂಡುಮಕ್ಕಳಾದವು. ನಿಧಾನವಾಗಿ ಮಕ್ಕಳ ಮಧ್ಯೆಯೂ ತಾರತಮ್ಯ ಶುರುವಾಯಿತು. ಹಾಲು, ಮೊಸರು, ತುಪ್ಪಗಳೆಲ್ಲ ಅವರ ಪಾಲಾಗುತ್ತಿದ್ದವು. ಅವು ಅಳುತ್ತ ಬಂದು 'ಅಜ್ಜಿ ಪಾರ್ಶಾಲಿಟಿ ಮಾಡ್ತಾಳ. ನಮಗೇನ ಕೊಡೂದೇ ಇಲ್ಲ' ಎಂದಾಗ ನನ್ನ ಕಣ್ಣೀರೊಂದೇ ಉತ್ತರವಾಗಿರುತ್ತಿತ್ತು.

ಸಂತೋಷನ ಮುಂಜಿಯ ಸಮಯದಲ್ಲಿ ಮನೆಯ ಶಾಂತಿ ಕದಡಿತ್ತು. ನಾನು ಅತ್ತ್ಯಾಳ ವಶದಲ್ಲಿದ್ದ ನನ್ನ ಒಡವೆಗಳನ್ನು ಕೇಳಿದಾಗ ಅತ್ತ್ಯಾ ಕೈಯಾಡಿಸಿದ್ದಳು. ನನ್ನ ಒಡವೆಗಳನ್ನು ಕರಗಿಸಿ ಓರಗಿತ್ತಿಗೆ ಒಡವೆ ಮಾಡಿಸಲಾಗಿತ್ತು. ಅಮ್ಮ ಜೋರಾಗಿಯೇ ಜಗಳವಾಡಿದಳು. ಅತ್ತ್ಯಾ 'ಅದರಾಗ ಏನು ತಪ್ಪದ? ಅವರು ಭಾಳ ವರದಕ್ಷಿಣಿ ಕೊಟ್ಟರು. ಅದಕ್ಕ ಹಾಕಿದ್ವಿ. ಕುಸುಮಾ ನಮ್ಮನಿ ಸೊಸಿ. ನಮಗಾದಾಗ ಅಕಿಗೆ ಮತ್ತ ಮಾಡಿಸಿ ಹಾಕ್ತೇವಿ' ಎಂದಾಗ ನಿರುತ್ತರಳಾದಳು. ಆದರೂ ಕಿಡಿ ಹೊತ್ತಿಕೊಂಡಿತ್ತು. ಅನಂತ, ಸುಗುಣಾ ಬೆಳಗಾವಿಯಲ್ಲಿ ತಮ್ಮನ ಮನೆಯಲ್ಲಿ ಪದವಿ ಓದುತ್ತಿದ್ದರು. ಅನಂತನಿಗೆ ಒಳ್ಳೆಯ ಅಂಕಗಳು ಬಂದಿದ್ದರೂ ಎಂಜಿನಿಯರಿಂಗ್ ಓದಿಸಲು ಅತ್ತ್ಯಾ ಒಪ್ಪಿರಲಿಲ್ಲ. 'ಒಂದು ಡಿಗ್ರಿ ಮಾಡಕೊಂಡು ಸುತ್ತ ಮುತ್ತ ಎಲ್ಲರೆ ನೌಕರಿ ಮಾಡಕೋತ ಹೊಲದಾಗ ಕೆಲಸಾ ಮಾಡು ನಿಮ್ಮಪ್ಪನ ಜತೆ' ಎಂಬ ಉಪದೇಶ ದೊರಕಿತ್ತು. ಡಿಗ್ರಿ ಮುಗಿದಾಕ್ಷಣ ಸ್ನೇಹಿತರ ಜೊತೆ ಬೆಂಗಳೂರಿಗೆ ಹೋದವ ಅಲ್ಲಿ ಉದ್ಯೋಗ ಗಿಟ್ಟಿಸಿಕೊಂಡಿದ್ದ. ಮನೆಯಲ್ಲಿ ಯುದ್ಧವೇ ನಡೆದಿತ್ತು. 'ಬೆಂಗಳೂರಿಗೆ ಅಷ್ಟು ದೂರ ಹೋಗೋ ಕಾರಣ ಏನಿತ್ತು? ಈಗಾದ್ರೂ ಬಿಟ್ಟು ಬಂದು ಇಲ್ಲೇ ನೋಡ್ಲಿ' ಎಂದಿದ್ದಳು ಅತ್ತ್ಯಾ. ಅನಂತ ಸಿಡಿದೆದ್ದಿದ್ದ. 'ನಾ ಅಲ್ಲೇ ನೌಕರಿ ಮಾಡಾಂವ' ಎಂದು ನಡೆದಿದ್ದ. ಅದೇಕೋ ಅಪರೂಪಕ್ಕೆ ವೆಂಕಟೇಶ 'ಇರಲಿ ಬಿಡು ಅಮ್ಮಾ, ಭೋಲೊ ನೌಕರಿ ಅದ. ಮಾಡಲಿ' ಎಂದಾಗ ನಮ್ಮಿಬ್ಬರಿಗೂ ಬೈಗಳ ಸುರಿಮಳೆಯಾಗಿತ್ತು.

ಸುಗುಣಾಳನ್ನು ಮೊದಲೇ ನೋಡಿದ ಪರಿಚಯದವರು ಮದುವೆ ಮಾಡಿಕೊಡಲು ಕೇಳಿದರು. ಒಳ್ಳೆಯ ಮನೆತನ. ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದ ಹುಡುಗ. ಮದುವೆ ನಿಶ್ಚಯವಾಗುತ್ತಲೂ ಓರಗಿತ್ತಿಯ ತವರಿನವರು ಪಾಲಿಗಾಗಿ ಒತ್ತಾಯಿಸಿದರು. ಒಟ್ಟು ಆಸ್ತಿಯಲ್ಲಿ ಮದುವೆ ಮಾಡುವಂತಿಲ್ಲವೆಂದು ಕ್ಯಾತೆ ತೆಗೆದರು. ಅತ್ತ್ಯಾ ಪಾಲಿನಲ್ಲಿ ಎಲ್ಲ ಆಸ್ತಿಯನ್ನೂ ಮೈದುನನಿಗೇ